**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 595/2019**

| | | | |
|---|---|---|---|
| **ಹೆಸರು** | **:** | **ನಾಗಮ್ಮ** | **ಚಾ.ಸಾ.1** |
| **ಗಂಡನ ಹೆಸರು** | **:** | **ನಾಗಯ್ಯಾ** | **ಪ್ರಾ.ಸಾ.1** |
| **ವಯಸ್ಸು** | **:** | **50 ವರ್ಷ** | **ದಿನಾಂಕಃ 12-07-2023** |
| **ಉದ್ಯೋಗ** | **:** | **ಗೃಹಿಣಿ** | |
| **ವಾಸಸ್ಥಳ** | **:** | **ಹುಲಸಗೂಡ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಆರೋಪಿ ನನಗೆ ಗೊತ್ತು. ಚಾಸಾ-4 ನನ್ನ ಮಗಳು. ಚಾಸಾ-5 ನನ್ನ ಗಂಡ. ಚಾಸಾ-6 ಮತ್ತು ಚಾಸಾ-7 ರವರು ನನಗೆ ಗೊತ್ತು.

ಈಗ 12-13 ವರ್ಷಗಳ ಹಿಂದೆ ಆರೋಪಿ ನಮ್ಮ ಮನೆಗೆ ಬೈದುಕೊಂಡು ಬಂದಿರುತ್ತಾನೆ. ನಂತರ ಆರೋಪಿ ಬಡಿಗೆಯಿಂದ ನನಗೆ ಹೊಡೆಯಲು ಬಂದಿರುತ್ತಾನೆ. ಮತ್ತು ಬಡಿಗೆಯಿಂದ ತೊಡೆಯ ಮೇಲೆ ಹೊಡೆದಿರುತ್ತಾರೆ. ನಂತರ ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ಹೆಬ್ಬೆಟ್ಟಿನ ಗುರುತು ನನ್ನದೆ ಮತ್ತು ಸದರಿ ದೂರು ನಾನೇ ನೀಡಿದ್ದು. ಆದ್ದರಿಂದದಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು.

ಮರುದಿನ ಘಟನಾ ಸ್ಥಳದಲ್ಲಿ ಪೊಲೀಸರು ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಮರುದಿನ ಬೆಳಿಗ್ಗೆ 10.00 ಗಂಟೆಗೆ ರಟಕಲ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**